**ಓ.ಎಸ್. 81/2013**
**ಪಿ.ಡಬ್ಲ್ಯೂ-2**

**ದಿನಾಂಕಃ 23.08.2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಲ್.ಬಿ.ಆರ್. ವಕೀಲರಿಂದಃ

ವಾದಿ ಮತ್ತು ಪ್ರತಿವಾದಿಗಳು 4 ಜನ ಅಣ್ಣ-ತಮ್ಮಂದಿರಿರುತ್ತಾರೆ , ಅವರುಗಳೆಂದರೆ ವಾದಿ, ಪ್ರತಿವಾದಿ, ಬಾಬುಸಾಹೇಬ್ ಮತ್ತು ಬಾಬು. ವಾದಿ, ಪ್ರತಿವಾದಿ ಮತ್ತು ಅವರ ಅಣ್ಣ-ತಮ್ಮಂದಿರು ದಾವಾ ಸ್ವತ್ತಿನಲ್ಲಿ ಜಂಟಿ ಸ್ವಾಧೀನದಲ್ಲಿರುವುದನ್ನು ನನ್ನ ಬಾಲ್ಯದಿಂದಲೂ ನೋಡುತ್ತಿರುತ್ತೇನೆ. ನನ್ನ ಜನ್ಮ ದಿನಾಂಕ 23.05.1994. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 1994 ರ ಪೂರ್ವದಲ್ಲಿ ಆದಂತಹ ನಡವಳಿಕೆಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ.

**2.** 1 ನೇ ಪ್ರತಿವಾದಿ ಸರ್ವೆ ನಂ. 129/1 ರಲ್ಲಿ ದಿಃ12.12.1972 ರಲ್ಲಿ ಅಬ್ದುಲ್ ವಾಜೀದ್‌ಸಾಬ್‌ರವರಿಂದ 1 ಎಕರೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿ ಸರ್ವೆ ನಂ. 129/1 ರಲ್ಲಿ 1 ಎಕರೆ ಜಮೀನನ್ನು ಖರೀದಿ ಮಾಡಿದ ದಿನದಿಂದ ಅವರೇ ಸ್ವಾಧೀನದಲ್ಲಿ ಇದ್ದರು, ಅವರ ಮರಣಾ ನಂತರ ಅವರ ವಾರಸುದಾರರ ಸದರಿ 1 ನೇ ಎಕರೆ ಜಮೀನಿನ ಸ್ವಾಧೀನದಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರೆದು ಎಲ್ಲರೂ ಜಂಟಿಯಾಗಿ ಸಾಗುವಳಿ ಮಾಡುತ್ತಿದ್ದರು ಎಂದು ಉತ್ತರಿಸಿರುತ್ತಾರೆ.

**3.** ದಿಃ15.07.1997 ರಂದು ವಾದಿ ಮತ್ತು 1 ನೇ ಪ್ರತಿವಾದಿ ಸರ್ವೆ ನಂ. 129 ರಲ್ಲಿ ತಲಾ 30 ಗುಂಟೆ ಜಮೀನನ್ನು ಸೈಯ್ಯದ್ ಸಮೀವುಲ್ಲಾ ಖಾನ್‌ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಖರೀದಿ ಮಾಡಿದ ನಂತರ ವಾದಿ ಮತ್ತು 1 ನೇ ಪ್ರತಿವಾದಿ

ತಾವು ಖರೀದಿ ಮಾಡಿದ ಜಮೀನಿನ ಪ್ರತ್ಯೇಕ ಸ್ವಾಧೀನದಲ್ಲಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಖರೀದಿ ಮಾಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ ಆದರೆ ಜಂಟಿಯಾಗಿ ಸಾಗುವಳಿ ಮಾಡುತ್ತಿರುತ್ತಾರೆ ಎಂದು ಉತ್ತರಿಸಿರುತ್ತಾರೆ.

**4.** ದಾವಾ ಸ್ವತ್ತಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ವಾದಿಯ ಹೇಳಿಕೆ ಮೇರೆಗೆ ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ